*E-MAIL* : librarian@kud.ac.in

***Phone*** : 0836-2215247,2742291,2215212
***Fax No.*** : 0836-2747884

ಕರ್ನಾಟಕ ವಿಶ್ವವಿದ್ಯಾಲಯ

**KARNATAK UNIVERSITY**

**Accredited 'A' Grade by NAAC 2022**

ಡಾ. ಎ.ಎಸ್. ಜೋಶಿ
ವಿಶ್ವವಿದ್ಯಾಲಯ ಗ್ರಂಥಪಾಲಕರು (ಪ್ರಭಾರಿ)

ಪ್ರೊ.ಶಿ.ಶಿ.ಬಸವನಾಳ ಗ್ರಂಥಾಲಯ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ನಂ. ಕವಿವಿ/ಶಿಶಿಬಗ್ರಂ/ಪರಿಚಲನ ವಿಭಾಗ/2025/** **ದಿನಾಂಕ: 19-08-2025**

## ಸೂಚನಾ ಪತ್ರ

ವಿಶ್ವವಿದ್ಯಾಲಯ ಗ್ರಂಥಾಲಯದ ಪುಸ್ತಕಗಳನ್ನು ಎರವಲಾಗಿ ಪಡೆಯುವದಕ್ಕಾಗಿ ಠೇವಣಿ ಇಟ್ಟ ಹಣವನ್ನು ಮರಳಿ ಪಡೆಯುವ ಬಗ್ಗೆ ಸೂಚನೆಗಳು

1. ಗ್ರಂಥಾಲಯ ಸದಸ್ಯತ್ವ ಹೊಂದಿದ **ಸ್ನಾತಕೋತ್ತರ ಅಂತಿಮ ವರ್ಷದ** ವಿದ್ಯಾರ್ಥಿಗಳು ಠೇವಣಿ ಹಣವನ್ನು ಹಿಂಪಡೆಯಲು ಅರ್ಜಿಯನ್ನು ಗ್ರಂಥಾಲಯದ ಕೌಂಟರನಲ್ಲಿ ಕೇಳಿ ತೆಗೆದುಕೊಳ್ಳಬೇಕು.

2. ಗ್ರಂಥಾಲಯದಿಂದ ಎರವಲು ಪಡೆದ ಎಲ್ಲ ಪುಸ್ತಕಗಳನ್ನು ಕಡ್ಡಾಯವಾಗಿ ಮರಳಿಸಿರಬೇಕು.

3. ಭರ್ತಿ ಮಾಡಿದ ಅರ್ಜಿಯ ಜೊತೆ ಠೇವಣಿ ತುಂಬಿದ **ಹಣದ ಮೂಲ ಬ್ಯಾಂಕ್ ಚಲನ್ ಪ್ರತಿಯನ್ನು (original candidate's challan copy)** ಮತ್ತು ಗ್ರಂಥಾಲಯದಿಂದ ಪಡೆದಿರುವ ಎಲ್ಲಾ ಎರವಲು ಟಿಕೇಟ್‌ಗಳನ್ನು ಮತ್ತು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಅರ್ಜಿಗೆ ಲಗತ್ತಿಸಬೇಕು.

4. ವಿದ್ಯಾರ್ಥಿಗಳು ಅರ್ಜಿಯಲ್ಲಿ ತಮ್ಮ ಖಾಯಂ ಅಂಚೆ ವಿಳಾಸ, ಫೋನ್ ನಂಬರ ಹಾಗೂ ಇ-ಮೇಲ್ ವಿಳಾಸವನ್ನು ಸ್ಪಷ್ಟವಾಗಿ ನಮೂದಿಸಬೇಕು.

5. ಗ್ರಂಥಾಲಯದ ಠೇವಣಿ ಹಣವನ್ನು RTGS ಮೂಲಕ ಮರುಪಾವತಿಸುವದರಿಂದ ವಿದ್ಯಾರ್ಥಿಗಳು ಕಡ್ಡಾಯವಾಗಿ ಅರ್ಜಿಯ ಜೊತೆಗೆ ತಮ್ಮ ಬ್ಯಾಂಕ್ ಪಾಸ ಬುಕ್‌ನ ಮುಖ ಪುಟದಲ್ಲಿದ್ದ ವಿವರದ ಝೆರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು. ಝೆರಾಕ್ಸ್ ಪ್ರತಿಯು ಬ್ಯಾಂಕ್ ಹೆಸರು, ಖಾತೆ ಸಂಖ್ಯೆ, ಬ್ಯಾಂಕ್ IFSC ಕೋಡ ನಂಬರ ಮತ್ತು ಬ್ರಾಂಚ್ ವಿವರವನ್ನು ಒಳಗೊಂಡಿರಬೇಕು.

6. ಗ್ರಂಥಾಲಯದ ನಿಯಮದ ಪ್ರಕಾರ ಪ್ರತಿ ಎರವಲು ಚೀಟಿಗೆ ರೂ. 50=00 ಗಳನ್ನು ನಿರ್ವಹಣಾ ಶುಲ್ಕವೆಂದು ಕಡಿತಗೊಳಿಸಿ ಉಳಿದ ಹಣವನ್ನು ಮರಳಿಸಲಾಗುತ್ತದೆ.

7. ವಿದ್ಯಾರ್ಥಿಗಳು ಅರ್ಜಿಯನ್ನು ಶೈಕ್ಷಣಿಕ ವರ್ಷ ಮುಗಿದ ನಂತರ **ದಿನಾಂಕ: 29-11-2025 ರ ಒಳಗೆ ಠೇವಣಿ ಹಣ ಮರಳಿ ಪಡೆಯಲು ಅರ್ಜಿ ಸಲ್ಲಿಸಬೇಕು.** ನಂತರ ಬಂದ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

19/8/25

ಗ್ರಂಥಪಾಲಕರು